■ ಹನಿ

## ಸೋನು ಖ್ಯಾತಿ

ಖ್ಯಾತಿಯ ಉತ್ತುಂಗದಲ್ಲಿರುವ ಗಾಯಕ ಸೋನು ನಿಗಂ ಕಳೆದ ವಾರ 'ಇಂಡಿಯಾ ಟುಡೇ ಕಂಕ್ಲೇವ್'ನಲ್ಲಿ ಸಂಗೀತದ ಬಗ್ಗೆ ಮನತುಂಬಿ ಮಾತನಾಡಿದ್ದಾನೆ. ರಿಯಾಲಿಟಿ ಷೋಗಳಿಂದಾಗಿ ಹೊಸ ಗಾಯಕರಿಗೆ ಊಟ ತಿಂಡಿಗೆ ಕೊರತೆ ಇಲ್ಲದ ಸ್ಥಿತಿ ಬಂದಿದೆ ಎಂದು ಸಂತಸ ಪಟ್ಟಿದ್ದಾನೆ. ಈ ಮಧ್ಯೆ 'ಸಿನಿಮಾಗಳ ಹಾಡುಗಳ ಆದಾಯದಲ್ಲಿ ಗಾಯಕರಿಗೂ ಒಂದು ಪಾಲು ಸಿಗಬೇಕು; ಅದಕ್ಕೆ ಕಾನೂನು ಜಾರಿಗೆ ಬರುವವರೆಗೂ ನನ್ನ ಹೋರಾಟ ಮುಂದುವರಿಯುತ್ತದೆ' ಎಂದು ಘೋಷಿಸಿದ್ದಾನೆ.



ಈಗ ಸಿನಿಮಾದಲ್ಲಿ ಹಾಡುವ ಗಾಯಕರಿಗೆ ಒಮ್ಮೆ ಸಂಭಾವನೆ ಕೊಟ್ಟರೆ ಮುಗಿಯಿತು. ಆದರೆ ರೆಕಾರ್ಡಿಂಗ್ ಕಂಪೆನಿಗಳು ಮಾರಾಟದಿಂದ ನಿರಂತರವಾಗಿ ಹಣ ಪಡೆಯುತ್ತಲೇ ಇರುತ್ತವೆ. ಅದರಲ್ಲಿ ಗಾಯಕರಿಗೂ ಪಾಲು ಕೊಡಿ ಎನ್ನುವುದು ಸೋನು ಬೇಡಿಕೆ. 'ಈ ಕಾನೂನು ಬಂದರೆ ನನಗೆ ಹಳೇ ಬಾಕಿ 100 ಕೋಟಿ ರೂಪಾಯಿ ಬರಬೇಕಾಗುತ್ತದೆ. ಆದರೆ ಹಣಕ್ಕಾಗಿ ನನ್ನ ಹೋರಾಟವಲ್ಲ, ಅಷ್ಟೂ ಹಣ ನಾನು ಬಿಟ್ಟುಬಿಡುತ್ತೇನೆ. ಮುಂದಿನ ಗಾಯಕರಿಗೆ ಕಾನೂನಿನ ಲಾಭ ಸಿಗಲಿ' ಎಂದಿದ್ದಾನೆ ಸೋನು.

'ಇಂಡಿಯಾ ಟುಡೇ ಕಂಕ್ಲೇವ್'ನಲ್ಲಿ ಸೋನು ಮಾತು ಮತ್ತು ಹಾಡು ಕೇಳಲು ಗಝಲ್ ಖ್ಯಾತಿಯ ತಲಾತ್ ಅಜೀಜ್, ಪಂಕಜ್ ಉಧಾಸ್ ಕೂಡಾ ಬಂದು ಕುಳಿತಿದ್ದರಂತೆ. ಸಭೆಯಲ್ಲಿದ್ದ ಬಿಜೆಪಿ ಮಾಜಿ ಅಧ್ಯಕ್ಷ ನಿತಿನ್ ಗಡ್ಕರಿ ತಾನೂ ವೇದಿಕೆಗೆ ಹೋಗಿ ಸೋನು ಜತೆಗೆ ಹಾಡೊಂದಕ್ಕೆ ದನಿಗೂಡಿಸಿದರಂತೆ. ಸದ್ಯಕ್ಕೆ ಸೋನು ಮುಟ್ಟಿದ್ದೆಲ್ಲ ಚಿನ್ನ.



## ಕಣ್ಮರೆಯಾದ ಹೀರೊ

ಕೆಲವರಿರುತ್ತಾರೆ– ಎಲ್ಲದಕ್ಕೂ ಅವಸರ. ಅವರು ಯಾವುದಕ್ಕೂ ಕಾಯುವುದಿಲ್ಲ. ಬದುಕಿನ ಓಟದಲ್ಲಿ ಅವರ ವೇಗ ಎಷ್ಟಿರುತ್ತದೆ ಎಂದರೆ ಇನ್ನೂ ಮೀಸೆ ಮೊಳೆಯುವ ಹೊತ್ತಿಗೆ ಇಡೀ ಜಗತ್ತಿಗೆ ಅವರು ಪರಿಚಯವಾಗಿರುತ್ತಾರೆ. ಉಳಿದವರು 80ರ ಹರೆಯದಲ್ಲಿ ಮಾಡಿ ಮುಗಿಸುವುದನ್ನು ಇವರು 35–40ರ ವಯಸ್ಸಿನಲ್ಲೇ ದಾಟಿರುತ್ತಾರೆ. ಈತ ಇನ್ನೆಷ್ಟು ಎತ್ತರಕ್ಕೆ ಏರಬಹುದೋ ಎಂದು ಜನ ಆಶ್ಚರ್ಯದಿಂದ ನೋಡುತ್ತಿರುವಂತೆಯೇ ಫಕ್ಕನೆ ಕಣ್ಮರೆಯಾಗುತ್ತಾರೆ!

ಹಾಲಿವುಡ್ ನಟ ಪೌಲ್ ವಾಕರ್ ಈ ವರ್ಗಕ್ಕೆ ಸೇರಿದವನು. ಕಳೆದ ವಾರ 115 ಕಿ.ಮೀ ವೇಗದಲ್ಲಿ ಓಡುತ್ತಿದ್ದ ಕಾರಿನಲ್ಲಿ ಗೆಳೆಯನ ಜತೆಗೆ ಕುಳಿತಿದ್ದವನು ರಸ್ತೆ ಅಪಘಾತದಲ್ಲಿ ಮೃತಪಟ್ಟಾಗ ಆತನಿಗಿನ್ನೂ 40ರ ವಯಸ್ಸು. (ಬರ್ತ್‌ಡೇ: 12/9/73) ಆ್ಯಕ್ಷನ್ ಸಿನಿಮಾ ಪ್ರಿಯರ ಅಚ್ಚುಮೆಚ್ಚಿನ ಸರಣಿ ಚಿತ್ರ 'ಫಾಸ್ಟ್ ಆ್ಯಂಡ್ ಫ್ಯೂರಿಯಸ್'ನಲ್ಲಿ ಪೌಲ್ ವಾಕರ್‌ನನ್ನು ನೋಡಿದವರು ಎಂದೂ ಮರೆಯಲು ಸಾಧ್ಯವಿಲ್ಲ.

ಪುಟ್ಟ ಮಕ್ಕಳು ಧರಿಸುವ ಪ್ಯಾಂಪರ್ಸ್‌ನ ಟೀವಿ ಜಾಹೀರಾತಿನಲ್ಲಿ ಪೌಲ್ ಮೊದಲ ಬಾರಿ ಕಾಣಿಸಿಕೊಂಡಾಗ ಆತನ ವಯಸ್ಸು ಇನ್ನೂ ಎರಡು ವರ್ಷ! 12ರ ಹರೆಯದಲ್ಲಿ ಟೀವಿ ಷೋಗಳಲ್ಲಿ ಬಾಲನಟನಾಗಿ ಕಾಣಿಸಿಕೊಂಡ. ಹೈವೇ ಟು ಹೆವೆನ್, ಹೂ ಈಸ್ ದಿ ಬಾಸ್ ಮುಂತಾದ ಟೀವಿ ಸೀರಿಯಲ್‌ಗಳಲ್ಲಿ ನಟಿಸುತ್ತಲೇ, ಸಿನಿಮಾಗೆ ಹೆಜ್ಜೆ ಇಟ್ಟ. 1998ರಲ್ಲಿ ಈತ ಮೊದಲು ನಟಿಸಿದ ಕಾಮಿಡಿ ಚಿತ್ರ ಮೀಟ್ ದಿ ಡೀಡಲ್ಸ್. ಮುಂದೆ ಎರಡು ವರ್ಷಗಳ ಕಾಲ ಸಿನಿಮಾದಲ್ಲಿ ಸಿಕ್ಕಿದ್ದು ಪೋಷಕ ಪಾತ್ರಗಳೇ. 2001ರಲ್ಲಿ ಫಾಸ್ಟ್ ಆ್ಯಂಡ್ ಫ್ಯೂರಿಯಸ್ ಬಂದ ಬಳಿಕ ಪೌಲ್ ಅತ್ಯಂತ ಜನಪ್ರಿಯ ನಟನಾದ. ಆ್ಯಕ್ಷನ್ ಚಿತ್ರಗಳಲ್ಲಿ ಪೌಲ್ ಇರಲೇಬೇಕು ಎಂಬ ನಿಯಮವೇ ಹಾಲಿವುಡ್‌ನಲ್ಲಿ ಜಾರಿಗೆ ಬಂದಂತೆ ಪಾತ್ರಗಳು ಸಿಗುತ್ತಾ ಹೋದವು. 'ಫಾಸ್ಟ್ ಆ್ಯಂಡ್ ಫ್ಯೂರಿಯಸ್'ನ 7ನೇ ಭಾಗದಲ್ಲಿ ನಟಿಸುತ್ತಿದ್ದ ಆತ ಅಟ್ಲಾಂಟಾದಲ್ಲಿ ಶೂಟಿಂಗ್ ಮುಗಿಸಿದ್ದ. ಮುಂದಿನ ತಿಂಗಳು ಅಬುದಾಭಿಯಲ್ಲಿ ಶೂಟಿಂಗ್ ಇತ್ತು.

ರೇಸ್ ಕಾರು ಮತ್ತು ಸಮುದ್ರದಾಳದ ಮೋಹ ಈತನನ್ನು ಬಿಟ್ಟೂ ಬಿಡದಂತಿತ್ತು. ಹಲವು ಕಾರ್ ರೇಸ್‌ಗಳಲ್ಲಿ ಪ್ರಶಸ್ತಿ ಗೆದ್ದಿದ್ದ. ನ್ಯಾಷನಲ್ ಜಿಯಾಗ್ರಫಿ ಚಾನೆಲ್‌ನ 'ಶಾರ್ಕ್ ಮೆನ್'ನಲ್ಲಿ ಶಾರ್ಕ್‌ಗಳ ಜತೆ ನಟಿಸಿ ಮನೆಮಾತಾದ. ಎಲ್ಲಕ್ಕಿಂತ ಮುಖ್ಯವಾಗಿ ಎಲ್ಲೇ ನೈಸರ್ಗಿಕ ದುರಂತಗಳಾದರೂ ಅಲ್ಲಿಗೆ ತನ್ನ ಪರಿಹಾರ ತಂಡ ಕಟ್ಟಿಕೊಂಡು ಧಾವಿಸುತ್ತಿದ್ದ ಪೌಲ್. 'ರೀಚೌಟ್ ವರಲ್ಡ್‌ವೈಡ್' ಎಂಬ ಆತನ ತಂಡ ಚಿಲಿ, ಹೈಟೀ ಭೂಕಂಪದ ಸ್ಥಳಗಳಲ್ಲೆಲ್ಲ ಓಡಾಡಿ ಸಂತ್ರಸ್ತರಿಗೆ ನೆರವಾಗಿತ್ತು. ಹೈಯಾನ್ ಚಂಡಮಾರುತದ ಸಂತ್ರಸ್ತರಿಗೆ ನಿಧಿ ಸಂಗ್ರಹಿಸುವ ಸಭೆಯಲ್ಲಿ ಭಾಗವಹಿಸಿ ಮರಳುವಾಗಲೇ ಮೊನ್ನೆ ಈತನ ಕಾರು ಅಪಘಾತಕ್ಕೆ ಈಡಾಗಿದೆ. ಆ್ಯಕ್ಷನ್ ನಟನ ಬದುಕು ಟ್ರಾಜಿಡಿಯ ಅಂತ್ಯ ಕಂಡಿದೆ.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65